ಎಂದು ಅವನಿಗೆ ಅಳುಕುತ್ತಲೇ ಕೇಳಿದಳು.

ಅವನು 'ಇದರಲ್ಲಿ ನಾನು ಸುಳ್ಳು ಹೇಳಲಾ?. ಆ ಮುದುಕಿ ಸಾಯೋ ಸ್ಥಿತಿಯಲ್ಲಿದ್ದಾಳೆ' ಎಂದ.

'ನನ್ನ ಮೇಲೆ ಆಣೆಯಿಟ್ಟು ಹೇಳು...' ಎಂದು ಮತ್ತೊಮ್ಮೆ ಅಸಹಾಯಕಳಾಗಿ ಕೇಳಿದಳು.

ಅದು ಅವಳ ಗಂಡನ ನಿರೀಕ್ಷೆಗಿಂತಲೂ ಮಿಗಿಲಾಗಿತ್ತು. ಅವನು ಹೇಗೆ ಊರಿನವರಿಂದ ಬೇರೆಯಾಗಿ, ಅಂಗಡಿಗೆ ಹೋಗಿ ತನ್ನ ಹೆಂಡತಿಗೆಂದು ಏನನ್ನು ಕೊಂಡುಕೊಳ್ಳುವುದು ಎಂದು ಅಲೆದಾಡಿದ್ದು; ಒಂದು ಅಂಗಡಿಯಲ್ಲಿ ಅಂಗಡಿಯವನು: 'ನಿನ್ನ ಹೆಂಡತಿಯನ್ನು ನೀನು ಒಲಿಸಿಕೊಳ್ಳಬೇಕಾದರೆ ಈ ರವಿಕೆಯನ್ನು-ಬೆಲೆ ಜಾಸ್ತಿಯಾದರೂ ಪರವಾಗಿಲ್ಲ- ತಗೊಂಡು ಹೋಗಿ ನಿನ್ನವಳಿಗೆ ಕೊಡು. ಈಗ ತಾನೇ ಯಾರೋ ಒಬ್ಬ ರಸಿಕ ಇಂಥದ್ದೊಂದನ್ನು ತಗೊಂಡು ಹೋದ; ಈಗ ಉಳಿದಿರೋದು ಇದೊಂದೆ' ಎಂದು ತನ್ನ ಸಮಸ್ಯೆಯನ್ನು ಪರಿಹರಿಸಿದ್ದು ಇವೆಲ್ಲವನ್ನೂ ಅವಳಿಗೆ ವಿವರಿಸಿದ.

ಪಾಪ, ಅವಳು ಹೇಗೆ ತಾನೇ ಊಹಿಸಬೇಕು...

ಅವಳು ಅಂಬ್ಲಿ ಜಾತ್ರೆಗೆ ಹೋದಾಗಲೇ ಆ ಯುವಕನ ಜೊತೆಯಲ್ಲಿ ಹೋಗಲು ನಿರಾಕರಿಸಿದಾಗ ತಿಳಿದಿದ್ದೆಂದರೆ...

ಬೇಸರದಿಂದ ತನ್ನ ತಲೆಯನ್ನು ಹಿಡಿದುಕೊಂಡು ಅವನು ಕೂಗಿ ಹೇಳಿದ: 'ಹುಚ್ಚಿಯಾಗಬೇಡ, ನಿನಗೆ ಇಷ್ಟವಾದ ಬಟ್ಟೆಗಳನ್ನೇ ತಗೊಂಡಿದ್ದೀನಿ...?'

* * *

'ಬೇರೊಬ್ಬ ರಸಿಕ ಆ ರವಿಕೆಯನ್ನು ತೆಗೆದುಕೊಂಡು ಹೋದ' ಎಂಬ ಮಾತನ್ನು ಕೇಳಿದ ಮೇಲೆ ಅವಳು ಇನ್ಯಾರೋ ಅಲ್ಲದೆ, ಅವನೇ ಇರಬೇಕೆಂದು ಊಹಿಸಿದಳು. ಆದರೆ ಅವನನ್ನು ಕೇಳುವುದಕ್ಕೆ ಮನಸ್ಸಾಗಲಿಲ್ಲ. ಅವಳು ಕಂಬನಿದುಂಬಿದ ಕಣ್ಣುಗಳೊಂದಿಗೆ 'ನನಗೀಗ ಆ ಮನೆಯನ್ನು ಬಿಟ್ಟಿರಲು ಆಗ್ತಾ ಇಲ್ಲ. ಏನಾದರೂ ಆಗಲಿ, ನನ್ನನ್ನು ನಂಬಿದ ನನ್ನ ಗಂಡನಿಗೆ ನಾನು ಎರಡು ಬಗೆಯಲಾರೆ ನಿನಗೆ ನನ್ನ ಮೇಲೆ ಅಷ್ಟೊಂದು ಆಸಕ್ತಿಯಿದ್ದರೆ ನನ್ನನ್ನು ಪ್ರಚೋದಿಸಬೇಡ' ಎಂದು ಹೇಳಿ ಅತ್ತ ತಿರುಗಿದಳು.

ಕೋಪಗೊಂಡ ಅವನು ಅವಳನ್ನು ಅಡ್ಡಗಟ್ಟಿ ಹೇಳಿದ: 'ನೋಡು ನಿನಗೇನು ಗೊತ್ತು? ನಿನಗೋಸ್ಕರ



ನನ್ನ ಸಂಬಂಧಿಯ ಮನೆಗೆ ಹೋಗಿ ನನ್ನ ಹೆಂಡತಿಯನ್ನು ಬಿಟ್ಟು ಬಂದೆ. ಈಗ...' ಎಂದ.

ಅದಕ್ಕವಳು ಅವನ ಕಡೆ ಬಾಯಗಲಿಸಿ ಬೆರಗಾಗಿ ನೋಡಿದಳು; ಅದು ಮೌನದ ಕಿರುಚಾಟದಂತಿತ್ತು. ಅವಳ ಕಂಬನಿ ತುಂಬಿದ ಕಣ್ಣುಗಳು ಸಹರಾ ಮರುಭೂಮಿಯಂತಾಗಿದ್ದವು.

ತನ್ನ ಎಂದಿನ ಸ್ಥಿತಿಗೆ ಮರಳಿ ಅವನ ಕಡೆ ನೋಡಿದಾಗ ಅವನು ನಿರ್ಜೀವನಂತೆ ಕಾಣಿಸಿದ. ಅವನನ್ನು ಕ್ಷಮೆಯಾಚಿಸುವಂತೆ 'ನಾನೇನು ಮಾಡಿದೆನೋ ಹಾಗೆಯೇ ನೀನೂ ಮಾಡು, ನಿನ್ನ ಹೆಂಡತಿಯ ಮುಂದೆ ನಿನ್ನೆಲ್ಲಾ ಸ್ವಾಭಿಮಾನವನ್ನು ನುಂಗಿಕೊಂಡು ಅವಳನ್ನು ವಾಪಸ್ಸು ಕರೆದುಕೊಂಡು ಬಾ, ನೀನು ಹೇಳಿದಂತೆ ನಾನು ಮಾಡಿದೆ... ಹೀಗಾಯ್ತು, ನಾನೇನು ಮಾಡಲಿ?' ಎಂದು ಒಂದೇ ಸಮ ಬಡಬಡಿಸಿದಳು. ನಿದ್ರೆಯಿಂದ ಎಚ್ಚರಾದವಳಂತೆ ಅಲ್ಲಿಂದ ಹೊರಟಳು. ಧಾರೆಯಾಗಿ ಸುರಿಯುತ್ತಿರುವ ಕಣ್ಣೀರನ್ನು ತನ್ನ ಸೆರಗಿನಿಂದ ಒರಸಿಕೊಂಡು ತಗ್ಗಿದ ಧ್ವನಿಯಲ್ಲಿ 'ಹೋಗು, ಅವಳನ್ನು ವಾಪಸು ಕರಕೊಂಡು ಬಾ, ನಾನು ಏನು ಮಾಡಿದೆನೋ ಅದನ್ನು ನೀನೂ ಮಾಡು, ಸಾವಿರ ಸಮಸ್ಯೆಗಳಿಗೆಲ್ಲಾ ಅದೊಂದೇ ಪರಿಹಾರ!' ಎಂದು ಹೊರಟು ಹೋದಳು.

●

**ಟಿಪ್ಪಣಿ**

1. ಕೊತ್ಲಾ- ಆಹಾರ ಸಂಗ್ರಹಿಸಿಡುವ ಮರದ ಪೆಟ್ಟಿಗೆ
2. ಕಂಧಿ-ಮೊಸರು ಮತ್ತು ಕಡಲೆಹಿಟ್ಟು ಬಳಸಿ ಮಾಡಿದ ತೊವ್ವೆ
3. ವಧಿ- ಮಿಳ್ಳೆ